REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 | ಸಂಚಿಕೆ : 31 | 5 ನವೆಂಬರ್ 2025 | ಬುಧವಾರ | ಪುಟಗಳು : 8 | ಬೆಲೆ : 2/-

### 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆ

## ಸಹಕಾರ ಸಪ್ತಾಹದ ಆಚರಣೆ ಅರ್ಥಪೂರ್ಣವಾಗಿರಲಿ - ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು** : 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಅರ್ಥಪೂರ್ಣವಾಗಿ ಆಚರಣೆಯಾಗಲಿ. ಈ ಸಂದರ್ಭದಲ್ಲಿ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾದ ಚಿಂತನ-ಮಂಥನಗಳು ನಡೆಯಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ತಿಳಿಸಿದರು.

72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ : 24.10.2025 ರಂದು ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉದ್ಘಾಟನಾ ಸಮಾರಂಭದಲ್ಲಿ ರಾಜ್ಯದ ಸಹಕಾರ ಚಳವಳಿಯ ಬೆಳವಣಿಗೆಗೆ ಶ್ರಮಿಸುತ್ತಿರುವ ಸಹಕಾರಿಗಳನ್ನು ಮತ್ತು ಇಲಾಖೆಯ ನಿವೃತ್ತ ಅಧಿಕಾರಿಗಳನ್ನು ಗುರುತಿಸಿ "ಸಹಕಾರ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಕರ್ನಾಟಕದ ಸಹಕಾರ ವಲಯದಲ್ಲಿ ಪ್ರಾಥಮಿಕ ಕೃಷಿ ಪತ್ತು ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಸ್ಥೆಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳು ಬೃಹದಾಕಾರವಾಗಿ ಬೆಳೆದಿವೆ. 16 ಹಾಲು ಒಕ್ಕೂಟಗಳಿಂದ ಪ್ರತಿದಿನ ಸುಮಾರು 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ರಾಜ್ಯ ಸರ್ಕಾರ ಹಾಲಿನ ಉತ್ಪಾದನೆಗೆ ಅಗತ್ಯ ಉತ್ತೇಜನ ನೀಡಿದೆ.

ಅದೇ ರೀತಿ ಕೃಷಿ ಪತ್ತಿನ ಸಾಲದ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕು. ಇದಕ್ಕೆ ನಾವೆಲ್ಲರೂ ಪ್ರಯತ್ನಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು. ಪ್ರಸ್ತುತ ಸಹಕಾರ ಸಹಕಾರ ಇಲಾಖೆಯ ಜವಾಬ್ದಾರಿಯನ್ನು



ಹೊತ್ತಿದ್ದೇನೆ. 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ಸಹಕಾರಿಗಳು ಬದ್ಧತೆಯಿಂದ ಪಾಲ್ಗೊಳ್ಳಬೇಕು ಎಂದರು.

## ಸಹಕಾರ ಸಂಸ್ಥೆಗಳ ಬಲವರ್ಧನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಉತ್ತೇಜನವನ್ನು ನೀಡಬೇಕು - ಎಚ್.ಕೆ. ಪಾಟೀಲ



ಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಚ್.ಕೆ. ಪಾಟೀಲ ರವರು ಮಾತನಾಡಿ, ರಾಜ್ಯದಲ್ಲಿ ಸಪ್ತಾಹದ ಆಚರಣೆ ಸಹಕಾರ ಚಳವಳಿಯ ಬಲವರ್ಧನೆಗೆ ಪೂರಕವಾಗಿ ನಡೆಯಬೇಕು. ಚಳವಳಿಯನ್ನು ಶಕ್ತಗೊಳಿಸುವಿಕೆ ಕುರಿತು ವಿಚಾರ ಸಂಕಿರಣಗಳು ಏರ್ಪಾಡಾಗಬೇಕು. ವಿವಿಧ ರೀತಿಯ ಸಹಕಾರ ಸಂಸ್ಥೆಗಳ ಬಲವರ್ಧನೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಉತ್ತೇಜನವನ್ನು ನೀಡಬೇಕು. ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ವ್ಯವಸ್ಥೆ ಸುಧಾರಣೆಯಾಗಬೇಕು. ಸಹಕಾರ ಕ್ಷೇತ್ರದ ಅಬಲವರ್ಗಗಳಾದ ನೇಕಾರಿಕೆ, ಬಡಗಿ, ಕಮ್ಮಾರಿಕೆ, ಮೀನುಗಾರಿಕೆ ಈ ರೀತಿಯ ವೃತ್ತಿಮೂಲದ ಸಹಕಾರ ಸಂಸ್ಥೆಗಳಿಗೆ ಸರ್ಕಾರದ ಬೆಂಬಲ ಅಗತ್ಯವಾಗಿದೆ. ಆದ್ದರಿಂದ ಸಪ್ತಾಹದ ಈ ಸಂದರ್ಭದಲ್ಲಿ ಕ್ರಾಂತಿಕಾರಕ ಆಶಯಗಳು ಹೊರಬರುವ ಮೂಲಕ ಚಳವಳಿಯ ಬೆಳವಣಿಗೆಗೆ ಪೂರಕವಾದ ಸಪ್ತಾಹದ ಆಚರಣೆ ನಡೆಯಲಿ ಎಂದು ತಿಳಿಸಿದರು.

ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾದ ಕೆಲಸಗಳನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ನಿರ್ವಹಿಸಿಕೊಂಡು ಬರುತ್ತಿದೆ. ಇದರ ಹೊಣೆ ಹೊತ್ತಿರುವ ಶಾಸಕರು ಹಾಗೂ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರ ಮಾರ್ಗದರ್ಶನದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಚಳವಳಿಯ ಸಾಧಕ ಬಾಧಕಗಳನ್ನು ಕುರಿತು ಚಿಂತನ ಮಂಥನ ನಡೆಸುವ ಮೂಲಕ ಆಚರಿಸೋಣ ಎಂದು ಸಹಕಾರಿಗಳಿಗೆ, ಇಲಾಖಾಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದರು.

4ನೇ ಪುಟಕ್ಕೆ...

ಅಕ್ಟೋಬರ್ ತಿಂಗಳ ಜಿಎಸ್‌ಟಿ ಆದಾಯ ಸಂಗ್ರಹದಲ್ಲಿ ಪ್ರಥಮ ಸ್ಥಾನದಲ್ಲಿ ಕರ್ನಾಟಕ 2

ಸಹಕಾರ ಸಪ್ತಾಹಕ್ಕೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲ ದೊರೆಯುತ್ತಿದೆ 6

ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಶ್ರಮಿಕರ ಜೀವನವೇ ಶ್ರೇಷ್ಟವಾದುದು ಎನ್ನುವ ಕನಕದಾಸರ ಸಂದೇಶ ಇಂದಿಗೂ ಪ್ರಸ್ತುತವಾಗಿದೆ

**"ಕುಲಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?"**

ಎಂದು ಪ್ರಶ್ನಿಸುವ ಕನಕದಾಸರು ಕರ್ನಾಟಕದಲ್ಲಿ ಹದಿನೈದು ಹದಿನಾರನೇ ಶತಮಾನದ ದಾಸಪಂಥದ ಪ್ರಮುಖರಲ್ಲಿ ಒಬ್ಬರಾಗಿದ್ದರು. ತಮ್ಮ ಕಾಲ ಘಟ್ಟದ ಜನರ ನಡುವೆ ಇದ್ದ ಮೇಲು–ಕೀಳು ಎನ್ನುವ ತರತಮ ವ್ಯವಸ್ಥೆಯನ್ನು ಖಂಡಿಸುವ, ಲೇವಡಿ ಮಾಡುವ, ತಿಳಿ ಹೇಳುವುದನ್ನು ತಮ್ಮ ಪದದ ಮೂಲಕ ವ್ಯಕ್ತಗೊಳಿಸುತ್ತಿದ್ದರು.

ಮನುಜರಾಗಿ ಹುಟ್ಟಿದ ಪ್ರತಿಯೊಬ್ಬರೂ ಒಂದೇ ಹೊರತು ಅವರಲ್ಲಿ ಮೇಲು ಕೀಳು ಎನ್ನುವ ಭೇದ ಸಲ್ಲದು. ದೇವರಿಗೆ ಉಚ್ಚ ಜಾತಿಯ ಜನ ಮಾತ್ರವಲ್ಲ ಅವನನ್ನು ಆರಾಧಿಸುವ, ಭಜಿಸುವ ಎಲ್ಲರೂ ಒಂದೆ. ದೇವರಿಗೆ ಕುಲ ಮುಖ್ಯವಲ್ಲ ಗುಣ ಮುಖ್ಯ ಎಂದು ತಮ್ಮ ನಡೆ – ನುಡಿಯ ಮೂಲಕ ಸಾರಿದವರು.

ನಮ್ಮ ನಾಡು ಬಹು ಹಿಂದಿನಿಂದಲೂ, ರೋಗಗ್ರಸ್ತ ಸಮಾಜವನ್ನು ತಿದ್ದುವ, ತಿಳಿ ಹೇಳಿವ ಅನೇಕ ಸಾಧು–ಸಂತರನ್ನು, ವಚನಕಾರರನ್ನು, ಸಮಾಜ ಸುಧಾರಕರನ್ನು ಕಂಡಿದೆ. ಎಲ್ಲರೂ ತಮ್ಮ ಕಾಲ ಘಟ್ಟದ ಸಾಮಾಜಿಕ ಮೌಢ್ಯ, ಮೌಲ್ಯಗಳನ್ನು ಸುಧಾರಿಸಲು ಶ್ರಮಿಸಿದ್ದಾರೆ.

ತಿಮ್ಮಪ್ಪನಾಯಕರು ಪಾಳೆಯಗಾರರಾಗಿ ಧನಸಂಪತ್ತನ್ನು, ವೈಭವವನ್ನು, ಅಧಿಕಾರವನ್ನು ಅನುಭವಿಸಿದವರು. ನಂತರ, ಜೀವನವೆನ್ನುವುದು ನಶ್ವರ ಎನ್ನುವುದನ್ನರಿತು, ಎಲ್ಲವನ್ನೂ ತ್ಯಜಿಸಿ ಕನಕದಾಸರಾಗಿ ಬದಲಾದರು. ತಮ್ಮ ಸುತ್ತಲಿನ ಜನ ನಿತ್ಯ ಜಪ ತಪವ ಮಾಡಿ ನಿತ್ಯ ಬದುಕಿನಲ್ಲಿ ಕಪಟಿಗಳಾಗಿ ವರ್ತಿಸುವುದನ್ನು ಕಂಡು; **ಜಪವ ಮಾಡಿದರೇನು ತಪವ ಮಾಡಿದರೇನು, ವಿಪರೀತ ಕಪಟ ಗುಣ ಕಲುಷವಿದ್ದವನು** ಎಂದು, ತಮ್ಮ ಕೀರ್ತನೆಗಳ ಮೂಲಕ ಸಾಮಾಜಿಕ ಅಸಮಾನತೆಗಳನ್ನು ತಿದ್ದುತ್ತಾ ಹೋಗುತ್ತಾರೆ.

ಕನಕದಾಸರ ಕೀರ್ತನೆಗಳು ಲೋಕದೃಷ್ಟಿ, ವಿಮರ್ಶಾತ್ಮಕ ನೋಟ ಮತ್ತು ವೈಚಾರಿಕತೆಯನ್ನು ಮುಖ್ಯವಾಗಿ ಒತ್ತಿ ಹೇಳುತ್ತವೆ, ಮೂಢನಂಬಿಕೆಗಳು, ಕಂದಾಚಾರಗಳನ್ನು ಖಂಡಿಸುತ್ತವೆ. ಕನಕದಾಸರ ರಾಮಧಾನ್ಯ ಚರಿತ್ರೆ ಇದಕ್ಕೊಂದು ಉತ್ತಮ ನಿದರ್ಶನ ಎನ್ನಬಹುದಾಗಿದೆ. ರಾಗಿ ಹಾಗೂ ಭತ್ತದ ನಡುವೆ ತಮ್ಮಲ್ಲಿ ಯಾರು ಮೇಲು, ಯಾರು ಕೀಳು ಎನ್ನುವ ವ್ಯಾಜ್ಯ ಉಂಟಾಗುತ್ತದೆ. ಇದನ್ನು ಪರಿಹರಿಸಿಕೊಳ್ಳಲು ನೇರ ರಾಮನಲ್ಲಿಗೆ ತಮ್ಮ ಅಹವಾಲನ್ನು ಒಯ್ಯುತ್ತವೆ.

ಮೊದಲಿಗೆ ಭತ್ತ ತಾನೇ ಶೇಷ್ಟನೆಂದು, ತನ್ನನ್ನು ಮೇಲು ವರ್ಗದವರು ಸೇವಿಸುತ್ತಾರೆ ಎಂದು ತನ್ನ ಶ್ರೇಷ್ಠತೆಯನ್ನು ಮುಂದಿಟ್ಟು ವಾದಿಸುತ್ತದೆ. ನಂತರ ರಾಗಿ ತನ್ನನ್ನು ಸೇವಿಸುವವರು ಶಕ್ತಿವಂತರಾಗಿಯೂ ಎಂಥಹ ಶ್ರಮದ ಕೆಲಸವನ್ನಾದರೂ ಮಾಡಬಲ್ಲರಾಗಿಯೂ, ಸದಾ ಆರೋಗ್ಯವಂತರಾಗಿಯೂ ಇರುತ್ತಾರೆಂದು ತನ್ನ ಹಿರಿಮೆಯನ್ನು ವಿನಮ್ರವಾಗಿ ರಾಮನ ಮುಂದೆ ಸಾರುತ್ತದೆ.

ಹೀಗೆ ಎರಡೂ ತಮ್ಮ ಹಿರಿಮೆಗಳನ್ನು ಹೇಳಿಕೊಂಡ ಮೇಲೆ ರಾಮ ಶ್ರಮಿಕ ವರ್ಗದ ಆಹಾರವಾದ ರಾಗಿಯೇ ಗುಣದಲ್ಲಿ ಶ್ರೇಷ್ಟವೆಂದು ಸಾರುತ್ತಾನೆ. ಈ ರೀತಿಯಾಗಿ, ಶ್ರಮಿಕರ ಜೀವನವೇ ಶ್ರೇಷ್ಟವಾದುದು ಎನ್ನುವ ಕನಕದಾಸರ ದಾಸವಾಣಿ ಇಂದಿಗೂ ಪ್ರಸ್ತುತವಾಗಿದೆ.

ಕೊನೆಯಲ್ಲಿ ಕನಕದಾಸರು ಹೇಳುವಂತೆ; **ಜಲವೇ ಸಕಲ ಕುಲಕ್ಕೆ ತಾಯಲ್ಲವೆ/ ಜಲದ ಕುಲವನೇನಾದರೂ ಬಲ್ಲಿರಾ...** ಎನ್ನುವ ವಾಣಿಯನ್ನು ಎಲ್ಲರೂ ಅರ್ಥ ಮಾಡಿಕೊಂಡರೇ ಸಾಕಲ್ಲವೇ?

▸▸ ಎಚ್.ಕೆ. ಪಾಟೀಲ

## ಅಕ್ಟೋಬರ್ ತಿಂಗಳ ಜಿಎಸ್‌ಟಿ ಆದಾಯ ಸಂಗ್ರಹದಲ್ಲಿ ಪ್ರಥಮ ಸ್ಥಾನದಲ್ಲಿ ಕರ್ನಾಟಕ

**ಬೆಂಗಳೂರು:** 2025ರ ಅಕ್ಟೋಬರ್ ತಿಂಗಳ ರಾಜ್ಯವಾರು ಸರಕು ಮತ್ತು ಸೇವಾ ತೆರಿಗೆ ಆದಾಯ ವರದಿ ಬಿಡುಗಡೆ ಆಗಿದೆ. 2024ರ ಅಕ್ಟೋಬರ್‌ಗೆ ಹೋಲಿಸಿದರೆ 2025ರ ಅಕ್ಟೋಬರ್ ದೇಶಿಯ ಜಿಎಸ್‌ಟಿ ರೂ.1,45,052 ಕೋಟಿ ಸಂಗ್ರಹವಾಗಿದೆ, ಅಂದರೆ ಶೇ.2ರಷ್ಟು ಬೆಳವಣಿಗೆ ಹೊಂದಿದೆ. ಆ ಮೂಲಕ ಪ್ರಮುಖ ಆರ್ಥಿಕ ರಾಜ್ಯಗಳ ಬೆಳವಣಿಗೆ ದರದಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿ ಇದೆ.




**ಜಿಎಸ್‌ಟಿ ಆದಾಯ ರೂ.1.95 ಲಕ್ಷ ಕೋಟಿ ಸಂಗ್ರಹ:** ಹಣಕಾಸು ಸಚಿವಾಲಯ ರಾಜ್ಯಗಳ ಜಿಎಸ್‌ಟಿ ಆದಾಯದ ಸಂಗ್ರಹ ಮತ್ತು ಬೆಳವಣಿಗೆ ದರ ಮಾಹಿತಿ ಬಿಡುಗಡೆ ಮಾಡಿದೆ. ಆ ಪೈಕಿ ಅಕ್ಟೋಬರ್ ತಿಂಗಳ ಜಿಎಸ್‌ಟಿ ಆದಾಯ ರೂ.1.95 ಲಕ್ಷ ಕೋಟಿ ಸಂಗ್ರಹವಾಗಿದೆ. ತೆರಿಗೆ ಕಡಿತದ ಹೊರತಾಗಿಯೂ ಶೇ. 4.6 ರಷ್ಟು ಏರಿಕೆ ಕಂಡಿದೆ. ಹಣಕಾಸು ಸಚಿವಾಲಯದ ಮಾಹಿತಿಯ ಪ್ರಕಾರ, ಕೇಂದ್ರ ಜಿಎಸ್‌ಟಿ ರೂ.36,547 ಕೋಟಿ, ರಾಜ್ಯ ಜಿಎಸ್‌ಟಿ ರೂ.45,134 ಕೋಟಿ ಮತ್ತು ಇಂಟಿಗ್ರೇಟೆಡ್ ಜಿಎಸ್‌ಟಿ ರೂ.1,06,443 ಕೋಟಿ ಸೇರಿದಂತೆ ಹೆಚ್ಚುವರಿಯಾಗಿ ಸರ್ಕಾರವು ಸೆಸ್‌ನಿಂದ ರೂ.7,812 ಕೋಟಿ ಸಂಗ್ರಹಿಸಿದೆ.

**ಇತರೆ ರಾಜ್ಯಗಳ ಜಿಎಸ್‌ಟಿ ಸಂಗ್ರಹ ಹೀಗಿದೆ :** ಕರ್ನಾಟಕ ರೂ. 14,395 ಕೋಟಿ ಬೆಳವಣಿಗೆ ದರ 10%, ಗುಜರಾತ್ ರೂ. 12,113 ಕೋಟಿ ಬೆಳವಣಿಗೆ ದರ 6%, ಮಹಾರಾಷ್ಟ್ರ ರೂ. 32,025 ಕೋಟಿ ಬೆಳವಣಿಗೆ ದರ 3%, ತೆಲಂಗಾಣ ರೂ. 5,726 ಕೋಟಿ ಬೆಳವಣಿಗೆ ದರ 10%, ತಮಿಳುನಾಡು ರೂ. 11,588 ಕೋಟಿ ಬೆಳವಣಿಗೆ ದರ 4%, ಉತ್ತರ ಪ್ರದೇಶ ರೂ. 9,806 ಕೋಟಿ ಬೆಳವಣಿಗೆ ದರ 2%

**ಜಿಎಸ್‌ಟಿ ಸಂಗ್ರಹದಲ್ಲಿ ಕುಸಿತ ಕಂಡ ರಾಜ್ಯಗಳು :** ಹಿಮಾಚಲ ಪ್ರದೇಶದಲ್ಲಿ 17%, ಜಾರ್ಖಂಡ್‌ನಲ್ಲಿ ಶೇ.15ರಷ್ಟು ಕುಸಿತ, ಉತ್ತರಾಖಂಡ್–13%, ಕೇರಳ–2%, ರಾಜಸ್ಥಾನದಲ್ಲಿ ಶೇ.3ರಷ್ಟು ಕುಸಿತ, ಆಂಧ್ರಪ್ರದೇಶದಲ್ಲಿ ಶೇಕಡಾ 9ರಷ್ಟು ಕುಸಿತ ಕಂಡಿವೆ.

# ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ : ರಜತ ಮಹೋತ್ಸವ

## ಜನರ ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಶ್ರಮಿಸುತ್ತಿದೆ : ಎಚ್.ಕೆ. ಪಾಟೀಲ



**ಕೊಪ್ಪಳ :** ಸಹಕಾರಿ ಸಂಘಗಳು ಸಾರ್ವಜನಿಕರ ಹಿತ ಕಾಯುವುದು ಮತ್ತು ಸಮಾಜದ ಅಭಿವೃದ್ಧಿ ಜತೆಗೆ ಜನರನ್ನು ಆರ್ಥಿಕ ಸ್ವಾವಲಂಬಿಗಳಾಗಿ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್. ಕೆ.ಪಾಟೀಲ್ ಅವರು ಹೇಳಿದರು.

ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ 25 ವಸಂತಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅಕ್ಟೋಬರ್ 25 ಮತ್ತು 26 ಎರಡು ದಿನಗಳ ರಜತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯೂನಿಯನ್ 'ಎರಡೂವರೆ ದಶಕಗಳಲ್ಲಿ ಸಾಗಿ ಬಂದ ಹಾದಿಯನ್ನು ಅವಲೋಕಿಸಿ ಮುಂದಿನ ಹೆಜ್ಜೆಗಳನ್ನು ಇರಿಸಬೇಕಿದೆ. ಸಹಕಾರಿ ಚಳವಳಿ ಉಳಿಯಲು ಬದ್ಧತೆ ಬೇಕು. ಯಶಸ್ವೀ ಸಹಕಾರಿ ಮುಖಂಡ ಮಾತ್ರ ಮುಂದೆ ಯಾವುದೇ ಕ್ಷೇತ್ರಕ್ಕೆ ಹೋದರೂ ಯಶಸ್ವಿ ನಾಯಕನಾಗಿ ಹೊರಹೊಮ್ಮುತ್ತಾನೆ' ಎಂದು ಹೇಳಿದರು.

'ಸಹಕಾರ ಕ್ಷೇತ್ರದ ಬಲವರ್ಧನೆಗೆ ಅನೇಕ ಮಹನೀಯರು ದುಡಿದು ನಂತರ ರಾಜಕಾರಣಕ್ಕೆ ಬಂದು ಅಲ್ಲಿಯೂ ಯಶಸ್ಸು ಕಂಡಿದ್ದಾರೆ. ಸಾರ್ವಜನಿಕರ ಸೇವೆ ಮಾಡಲು ರಾಜಕಾರಣದಲ್ಲಿ ಮೊದಲು ಅವಕಾಶ ಸಿಗುತ್ತಿತ್ತು. ಈಗ ಹಿಂದಿನ ಪರಿಸ್ಥಿತಿಯಿಲ್ಲ. ರಾಜಕಾರಣದಲ್ಲಿ ಪ್ರಜಾಪ್ರಭುತ್ವದ ಪಾಠವನ್ನು ಸಹಕಾರಿ ಧುರೀಣರು ಮಾತ್ರ ಕಲಿಸುತ್ತಿದ್ದಾರೆ ಎಂದರು.

ಬದ್ಧತೆಯುಳ್ಳ, ಪ್ರಾಮಾಣಿಕ ಸಹಕಾರಿಗಳಿಂದ ಮಾತ್ರ ಪ್ರಾಮಾಣಿಕ ರಾಜಕಾರಣ ನಿರೀಕ್ಷಿಸಲು ಸಾಧ್ಯ. ಸಹಕಾರಿ ಕ್ಷೇತ್ರ ರಾಜಕೀಯದಿಂದ ಮುಕ್ತವಾಗಿರಬೇಕು ಎಂದರು. ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ನಿಗೆ 25 ವರ್ಷಗಳಾದರೂ ತನ್ನ ಕ್ರಿಯಾಶೀಲ ಸಾಮರ್ಥ್ಯ ಹೆಚ್ಚಿಸಿ ಕೊಂಡಿರುವುದು ಪ್ರಶಂಸನೀಯ, ಸಹಕಾರಿ ರಂಗಕ್ಕೆ ತನ್ನದೇ ಆದ ಕೊಡುಗೆ ನೀಡುವ ಮೂಲಕ ಜಿಲ್ಲೆಯಲ್ಲಿ ಸಹಕಾರ ರಂಗವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಸ್ವಾಗತಾರ್ಹವಾದ ಸಂಗತಿಯಾಗಿದೆ ಎಂದು ಶ್ಲಾಘಿಸಿದರು. ಸಂಸದರಾದ ರಾಜಶೇಖರ ಹಿಟ್ನಾಳ ಅವರು ಮಾತನಾಡಿ 'ಎಲ್ಲರಿಗಾಗಿ ಒಗ್ಗೂಡುವುದೇ ಸಹಕಾರ ಕ್ಷೇತ್ರದ ಉದ್ದೇಶವಾಗಿದೆ. ದೇಶ ಪ್ರಗತಿಯಾಗಲು ಸಹಕಾರಿ ಮನೋಭಾವ ಬೇಕು ಎಂದು ಮಹಾತ್ಮ ಗಾಂಧೀಜಿ ಹೇಳಿದ ಮಾತು ಈ ಕ್ಷೇತ್ರದ ಅಭಿವೃದ್ಧಿಗೆ ಮೂಲ ತತ್ವವಾಗಿದೆ. ಮಹಿಳೆಯರು ಹಾಗೂ ರೈತರು ಅಭಿವೃದ್ಧಿ ಹೊಂದಲು ಸಹಕಾರ ರಂಗಕ್ಕೆ ಮತ್ತಷ್ಟು ಬೆಂಬಲ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡುತ್ತಾ, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ತನ್ನ ಸುಧೀರ್ಘ ಸೇವೆ ನೀಡುತ್ತಾ ಬಂದಿರುವುದು ಸ್ವಾಗತಾರ್ಹವಾದ ವಿಷಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಸಹಕಾರಿ ರತ್ನ ಪುರಸ್ಕೃತರು ಹಾಗೂ ಹಿರಿಯ ಸಹಕಾರಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಂಸದ ಸಂಗಣ್ಣ ಕರಡಿ, ಮಾಜಿ ಶಾಸಕರುಗಳಾದ ಅಮರೇಗೌಡ ಪಾಟೀಲ ಬಯ್ಯಾಪೂರ, ಆರ್‌ಕೆಡಿಸಿಸಿ ನಿರ್ದೇಶಕರಾದ ಬಸವರಾಜ ಹಿಟ್ನಾಳ, ಕರ್ನಾಟಕ ರಾಜ್ಯ ಮಾರಾಟ ಸಹಕಾರ ಮಹಾಮಂಡಳದ ನಿರ್ದೇಶಕರಾದ ಅಮರೇಶ ಪಾಟೀಲ, ಸಹಕಾರ ಇಲಾಖೆಯ ಅಧಿಕಾರಿಗಳು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

...1ನೇ ಪುಟದಿಂದ

## ಸಹಕಾರ ಸಪ್ತಾಹಕ್ಕೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲ ದೊರೆಯುತ್ತಿದೆ – ಜಿ.ಟಿ. ದೇವೇಗೌಡ

ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು, ಸಹಕಾರ ಸಪ್ತಾಹದ ಕಾರ್ಯಕ್ರಮದ ಆಯೋಜನೆಗೆ ಸರ್ಕಾರದ ಬೆಂಬಲದ ಅಗತ್ಯವಿದೆ. ಈ ಕಾರಣದಿಂದ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಎಚ್.ಡಿ. ದೇವೇಗೌಡ ಅವರನ್ನು ರಾಮನಗರದಲ್ಲಿ ಆಯೋಜನೆಯಾಗಿದ್ದ ಸಪ್ತಾಹದ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಲಾಗಿತ್ತು. ಅಂದಿನಿಂದ ಸಹಕಾರ ಸಪ್ತಾಹಕ್ಕೆ ಸರ್ಕಾರದ ಸಂಪೂರ್ಣ ಬೆಂಬಲ ದೊರೆಯುತ್ತಿದೆ ಎಂದರು.



ಮುಂದುವರೆದು ಮಾತನಾಡಿದ ಅವರು, ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಅವಧಿಯಲ್ಲಿ ಸರ್ಕಾರದ ಮೂಲಕ ಹಾಲಿಗೆ ಪ್ರೋತ್ಸಾಹಧನ ಹಾಗೂ ಯಶಸ್ವಿನಿ ಯೋಜನೆ, ಸಹಕಾರ ರತ್ನ ಪ್ರಶಸ್ತಿ ವಿತರಣೆಯನ್ನು ಆರಂಭ ಮಾಡಲಾಯಿತು. ನಂತರ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದಾಗಿನಿಂದಲೂ ಸಹ ಸಹಕಾರ ಕ್ಷೇತ್ರಕ್ಕೆ ಪೂರಕವಾಗಿ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಹಾಲಿನ ಸಮರ್ಪಕ ಬಳಕೆಗಾಗಿ ಶಾಲಾ ಮಕ್ಕಳಿಗೆ ಹಾಲು ವಿತರಣಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಡೈರಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಒಕ್ಕೂಟಗಳ ಸ್ಥಾಪನೆಗೆ ನೆರವಾಗಿದ್ದಾರೆ. ಹೀಗಾಗಿ ಸಹಕಾರ ಚಳವಳಿ ಹಿರಿಯರ ಮಾರ್ಗದರ್ಶನ ಶ್ರಮದ ಪ್ರತಿಫಲದಿಂದ ಉತ್ತಮವಾಗಿ ಬೆಳೆದಿದೆ ಎಂದರು.

ನೆಹರೂರವರು ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸ್ಮರಿಸುವುದು ಸಹಕಾರ ಸಪ್ತಾಹದ ಆಚರಣೆಯ ಉದ್ದೇಶ ಹಾಗೂ ಈ ಸಂದರ್ಭದಲ್ಲಿ ಸಹಕಾರ ಚಳವಳಿಯ ಸಾಧನೆ, ವೈಫಲ್ಯ ಹಾಗೂ ಭವಿಷ್ಯದ ಯೋಜನೆಗಳ ಕುರಿತು ಚಿಂತನ ಮಂಥನ ನಡೆಸುವುದಾಗಿದೆ ಎಂದರು.

ಚಳವಳಿಯ ಬೆಳವಣಿಗೆಗೆ ಮಾರ್ಗದರ್ಶನ ಅಗತ್ಯ: ಶಾಸಕರು ಹಾಗೂ ಮಾಜಿ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಮಾತನಾಡುತ್ತಾ, ಮುಖ್ಯಮಂತ್ರಿಯವರು ಸಹಕಾರ ಇಲಾಖೆಯ ನೇತೃತ್ವ ವಹಿಸಿ, ಸಪ್ತಾಹದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿರುವುದು ಇತಿಹಾಸ. ಅವರು ಸದಾಕಾಲ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಬೆಂಬಲ ನೀಡುತ್ತಾ ಬಂದಿದ್ದಾರೆ. ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಮಾರ್ಗದರ್ಶನದಲ್ಲಿ 7 ದಿನಗಳ ಕಾಲ ವಿವಿಧ ವಿಷಯಗಳ ಕುರಿತು ಉಪನ್ಯಾಸ ಹಾಗೂ ಚಿಂತನ ಮಂಥನ ಕಾರ್ಯಕ್ರಮಗಳ ಜೊತೆಗೆ ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಹಕಾರಿಗಳಿಗೆ "ಸಹಕಾರಿ ರತ್ನ" ಪ್ರಶಸ್ತಿಯನ್ನು ಸಹ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕ ಕ್ರಮಗಳನ್ನು ತೆಗೆದುಕೊಂಡು ಸಹಕಾರ ಕ್ಷೇತ್ರದ ನ್ಯೂನ್ಯತೆಗಳನ್ನು ಸರಿಪಡಿಸಿ, ಚಳವಳಿಯ ಬೆಳವಣಿಗೆಗೆ ಮಾರ್ಗದರ್ಶನ ನೀಡಬೇಕೆಂದು ತಿಳಿಸಿದರು.

ಸಭೆಯಲ್ಲಿ ಸಚಿವರುಗಳಾದ ಶಿವಾನಂದ ಪಾಟೀಲ್, ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರುಗಳಾದ ಎಸ್.ಟಿ. ಸೋಮಶೇಖರ್, ಕೆ. ಷಡಕ್ಷರಿ, ವಿ. ವೆಂಕಟೇಶ್, ವಿಧಾನ ಪರಿಷತ್ ಸದಸ್ಯರಾದ ಬಲ್ಕಿಷ್ ಭಾನು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಕೆಓಎಫ್ ಅಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಬಾಗಲಕೋಟೆ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಅಜಯ್‌ಕುಮಾರ್ ಸರನಾಯಕ್, ಗ್ರಾಹಕ ಮಹಾಮಂಡಳದ ಅಧ್ಯಕ್ಷರಾದ ಜಿ.ಪಿ. ಪಾಟೀಲ್, ವಿವಿಧ ಮಹಾಮಂಡಳಗಳ ಅಧ್ಯಕ್ಷರುಗಳು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಸಹಕಾರ ಇಲಾಖೆಯ ಕಾರ್ಯದರ್ಶಿ ಎಸ್.ಬಿ. ಶೆಟ್ಟಣ್ಣನವರ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಲೆಕ್ಕಪರಿಶೋಧನಾ ಇಲಾಖೆ ನಿರ್ದೇಶಕರಾದ ಎಂ.ಡಿ. ಮಲ್ಲೂರು, ಸಹಕಾರ ಇಲಾಖೆ ವಿಶೇಷ ಕರ್ತವ್ಯಾಧಿಕಾರಿ ಎ.ಸಿ. ದಿವಾಕರ್, ಸಹಕಾರ ಇಲಾಖೆಯ ಅಪರ ನಿಬಂಧಕರು ಮತ್ತು ಉಪನಿಬಂಧಕರುಗಳು ಮತ್ತು ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಭೆಯ ಆರಂಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ರವರು ಎಲ್ಲರನ್ನು ಸ್ವಾಗತಿಸಿದರು.

## ವಿಜಯಪುರದ ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕಿನ ನೂತನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆ

**ವಿಜಯಪುರ :** ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕಿನ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ರವೀಂದ್ರ ಶಂಕರ ಬಿಜ್ಜರಗಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಗುರುರಾಜ ಸಿದ್ದಪ್ಪ ಗಂಗನಳ್ಳಿ ಅವಿರೋಧವಾಗಿ ಆಯ್ಕೆ ಆಗಿರುವುದಾಗಿ ರಿಟರ್ನಿಂಗ್ ಆಫೀಸರ್‌ರವರು ಘೋಷಿಸಿದರು. ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳಾಗಿ ಶ್ರೀ ಗುರು (ಗುರುಪಾದಯ್ಯ) ಎಸ್. ಗಚ್ಚಿನಮಠ, ಶ್ರೀ ಶ್ರೀಹರ್ಷ ಎಸ್. ಪಾಟೀಲ, ಶ್ರೀ ಈರಣ್ಣ ಎಮ್. ಪಟ್ಟಣಶೆಟ್ಟಿ, ಶ್ರೀಮತಿ ಕರುಣಾ ವ್ಹಿ. ಅವರಂಗಬಾದ, ಶ್ರೀ ಸುರೇಶ ಜಿ. ಗಚ್ಚಿನಕಟ್ಟಿ, ಶ್ರೀ ವಿಜಯಕುಮಾರ ಡಿ. ಇಜೇರಿ, ಡಾ. ಸಂಜೀವ ಎಸ್. ಪಾಟೀಲ (ಮುಳವಾಡ), ಶ್ರೀ ವೈಜನಾಥ ಡಿ. ಕರ್ಪೂರಮಠ, ಶ್ರೀ ವಿಶ್ವನಾಥ ಎಸ್. ಪಾಟೀಲ (ಮಸಬಿನಾಳ), ಶ್ರೀ ರಾಜೇಂದ್ರ ಎಮ್.ಪಾಟೀಲ (ಉಪ್ಪಲದಿನ್ನಿ), ಶ್ರೀ ರಮೇಶ ಎಚ್.ಬಿದನೂರ, ಶ್ರೀ ಪ್ರಕಾಶಎಸ್. ಬಗಲಿ, ಶ್ರೀಮತಿ ಬೋರಮ್ಮ ಬಿ.ಗೊಬ್ಬುರ, ಶ್ರೀಮತಿ ಸೌಭಾಗ್ಯ ಎಸ್. ಭೋಗಶೆಟ್ಟಿ, ಶ್ರೀ ರಾಜಶೇಖರಎಸ್. ಕತ್ತಿ, ಶ್ರೀ ಸಾಯಬಣ್ಣಾ ಎಸ್. ಭೋವಿ, ಶ್ರೀ ಅಮೋಘ ಸಿದ್ದ ಎಮ್. ನಾಯ್ಕೋಡಿ.



# ದಿ ಸಿಂದಗಿ ಪಟ್ಟಣ ಸಹಕಾರ ಬ್ಯಾಂಕ್ ನಿ., ಸಿಂದಗಿ : ಷಷ್ಠಿಪೂರ್ತಿ ಕಾರ್ಯಕ್ರಮ



ಸಿಂದಗಿ: ದಿನಾಂಕ:20.09.2025ರಂದು ದಿ ಸಿಂದಗಿ ಪಟ್ಟಣ ಸಹಕಾರ ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಷಷ್ಠಿಪೂರ್ತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಷ.ಬ್ರ.ಡಾ. ಪ್ರಭು ಸಾರಂಗದೇವ ಶಿವಾಚಾರ್ಯರು ಸಾರಂಗಮಠ–ಗಚ್ಚಿನಮಠ ಸಿಂದಗಿ ವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಿಂದಗಿ ಶಾಸಕರಾದ ಮಾನ್ಯ ಶ್ರೀ ಅಶೋಕ ಎಂ. ಮನಗೂಳಿರವರು ನೇರವೇರಿಸಿ ಬ್ಯಾಂಕ್ 60 ವರ್ಷಗಳನ್ನು ಪೂರೈಸಿ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಬ್ಯಾಂಕು ಇನ್ನು ಹೆಚ್ಚಿನ ಪ್ರಗತಿಯನ್ನು ಹೊಂದಿ ಮುನ್ನಡೆಯಲಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶರಣಪ್ಪ ಎಸ್. ವಾರದರವರು ಮಾತನಾಡಿ ಬ್ಯಾಂಕಿನ ಈ ಅಭಿವೃದ್ಧಿಗೆ ತಮ್ಮೆಲ್ಲರ ಸಹಕಾರ, ಠೇವಣಿದಾರರ ಸಹಾಯ, ಸಹಕಾರವೇ ಕಾರಣವೆಂದರು. ಬ್ಯಾಂಕು ಸನ್ 2024–25ನೇ ಸಾಲಿನಲ್ಲಿಯೂ ಸಹ ಉತ್ತಮ ಬೆಳವಣಿಗೆ ದಾಖಲಿಸಿದೆ. ಮುಂದಿನ ದಿನಗಳಲ್ಲಿ ಬ್ಯಾಂಕುತನ್ನಎಲ್ಲ ಸದಸ್ಯರಿಗೆ ಹಾಗೂ ಗ್ರಾಹಕರಿಗೆಇನ್ನೂ ಹೆಚ್ಚಿನ ಸುಧಾರಿತ ಸೇವೆ ಒದಗಿಸಲು ಮುಂದಾಗಿದೆ ಎಂದರು.

ದಿನಾಂಕ : 31.03.2025ಕ್ಕೆ ಇದ್ದಂತೆ 8079 ಸದಸ್ಯರನ್ನು ಹೊಂದಿದ್ದು, ಪಾವತಿಯಾದ ಷೇರು ಬಂಡವಾಳ ರೂ.5 ಕೋಟಿ 16ಲಕ್ಷ, ನಿಧಿಗಳು ರೂ.11 ಕೋಟಿ75ಲಕ್ಷ, ಸ್ವಂತ ಬಂಡವಾಳ ರೂ.16ಕೋಟಿ 91ಲಕ್ಷ, ಠೇವಣಿಗಳು ರೂ.107 ಕೋಟಿ 92ಲಕ್ಷ, ಸಾಲಗಳು ರೂ.71 ಕೋಟಿ 92ಲಕ್ಷ, ಗುಂತಾವಣೆಗಳು ರೂ.44 ಕೋಟಿ 50ಲಕ್ಷ, ದುಡಿಯುವ ಬಂಡವಾಳ ರೂ.127 ಕೋಟಿ 70ಲಕ್ಷ, ನಿವ್ವಳ ಲಾಭ ರೂ.1ಕೋಟಿ 1ಲಕ್ಷ ಗಳಿಸಿದ್ದು, ಶೇ.9 ಲಾಭಾಂಶ ಘೋಷಿಸಲಾಗಿದೆ ಎಂದರು.

ಈ ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪ್ರಕಾಶ ಬಿ.ಕೋರಿ, ಆಡಳಿತ ಮಂಡಳಿ ಸದಸ್ಯರುಗಳಾದ ಶ್ರೀ ನಿಹಾಲ ಚಂದ ಆರ್. ಘೋರವಾಲ, ಶ್ರೀ ನೀಲಕಂಠ ಡಿ. ಗುಣಾರಿ, ಶ್ರೀ ಬಸವರಾಜ ಬಿ. ಕಮತಗಿ, ಶ್ರೀ ಮಹಾದೇವಪ್ಪ ಸಿ.ಸಿಂದಗಿ, ಶ್ರೀಮತಿ ಮಹಾದೇವಿ ಜಿ. ಬಮ್ಮಣ್ಣಿ, ಶ್ರೀಮತಿ ಮಹಾದೇವಿ ಸಿ.ಪಟ್ಟಣಶೆಟ್ಟಿ, ಶ್ರೀ ರವಿಕುಮಾರ ಎಸ್. ನಾಗೂರ, ಶ್ರೀ ಲಕ್ಷ್ಮಣ ಎಸ್. ದೊಡಮನಿ, ಡಾ. ವಿಜಯಕುಮಾರ ಜಿ. ವಾರದ, ಶ್ರೀ ಷಣ್ಮುಖಪ್ಪಎಸ್. ಸಂಗಮ, ಶ್ರೀ ಸಂತೋಷ ಎಂ.ಪೂಜಾರಿ, ಶ್ರೀ ಸಿದ್ಲಿಂಗಪ್ಪ ಎಸ್. ವಡ್ಡೋಡಗಿ, ಶ್ರೀ ಸುರೇಶಬಾಬು ಎಂ.ಜೋಗೂರ, ವೃತ್ತಿಪರ ನಿರ್ದೇಶಕರಾದ ಶ್ರೀ ಚನ್ನಮಲ್ಲಪ್ಪ ಬಿ. ಶಹಾಪೂರ, ಶ್ರೀ ಶಾಂತವೀರ ಸಿ.ಮಣೂರ, ಸಿ.ಎ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಸವರಾಜ ಬಿ.ದೇವೂರ ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು :** ಟೆಕ್ಸಟೈಲ್ ಕೋ–ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಶ್ರೀನಿವಾಸಮೂರ್ತಿ ಬಿ, ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅನುಪಾಲನಾಧಿಕಾರಿ ಶ್ರೀ ಪದ್ಮನಾಭನ್ ಸಿ.ಆರ್., ಪ್ರಭಾರ ವ್ಯವಸ್ಥಾಪಕ ಶ್ರೀ ಪ್ರಭಾಕರ ಸಿ. ಉಪಸ್ಥಿತರಿದ್ದರು.



# ಸಹಕಾರ ಕಾಯ್ದೆಗೆ ಬಲ ತುಂಬಿ ಹೈಕೋರ್ಟ್‌ನ ಆದೇಶ ಪಾಲಿಸಿ

ಕರ್ನಾಟಕ ಸಹಕಾರ ಸಂಘಗಳ (ಕೆಸಿಎಸ್) ಕಾಯ್ದೆ–1959 ಮತ್ತು ಸಹಕಾರ ಸಂಘಗಳ ನಿಯಮಗಳು–1960ರಲ್ಲಿರುವ ಹಲವು ನ್ಯೂನತೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ' ಕಾಯ್ದೆಯನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿ ತುರ್ತಾಗಿ ಸಮಗ್ರ ತಿದ್ದುಪಡಿಯನ್ನು ತರುವ ಅಗತ್ಯವಿದೆ' ಎಂದು ಹೇಳಿರುವುದು ಸ್ವಾಗತಾರ್ಹ ಹಾಗೂ ಸಕಾಲಿಕ. ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ರಿಟ್‌ಅರ್ಜಿಯೊಂದರ ವಿಚಾರಣೆ ಕಾಲಕ್ಕೆ ಕೆಸಿಎಸ್ ಕಾಯ್ದೆಯಲ್ಲಿನ ದೋಷಗಳನ್ನು ನಿಕಷಕ್ಕೆ ಒಳಪಡಿಸಿದೆ.

ಒಬಿರಾಯನ ಕಾಲದ ಈ ಕಾಯ್ದೆಗೆ ಇದುವರೆಗೆ ಆಡಳಿತ ನಡೆಸಿದ ಸರ್ಕಾರಗಳು ಹಲವು ತಿದ್ದುಪಡಿಗಳನ್ನು ತಂದಿದ್ದರೂ ಅಸ್ಪಷ್ಟತೆಗಳು ಇನ್ನೂ ಉಳಿದಿರುವುದನ್ನು ಪೀಠ ಗಮನಿಸಿದೆ. ಕಾಯ್ದೆಯ ಅಡಿಯಲ್ಲಿ ಬರುವ ಸದಸ್ಯತ್ವದ ಹಕ್ಕುಗಳು, ಅನರ್ಹತೆ, ಮತದಾರರ ಪಟ್ಟಿ ಸಿದ್ಧಪಡಿಸುವುದು, ಕಾಲಕಾಲಕ್ಕೆ ಚುನಾವಣೆ ನಡೆಸುವುದು, ಲೆಕ್ಕ ಪರಿಶೋಧನೆ ಮತ್ತು ಆಡಳಿತಾಧಿಕಾರಿ ನೇಮಕಾತಿಗೆ ಸಂಬಂಧಿಸಿದ ಹಲವು ನಿಯಮಗಳಲ್ಲಿ ಸಂಘರ್ಷದ ಅಂಶಗಳಿವೆ. ಎಲ್ಲ ಗೊಂದಲಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಸಿಎಸ್ ಕಾಯ್ದೆಗೆ ತಾರ್ಕಿಕವಾಗಿ ಸಮಗ್ರ ತಿದ್ದುಪಡಿಯನ್ನು ಮಾಡಬೇಕಿದೆ ಎಂಬುದಾಗಿ ಕೋರ್ಟ್ ಒತ್ತಿ ಹೇಳಿದೆ. ಹಣಕಾಸು, ವಸತಿ, ಕೃಷಿ, ಹೈನುಗಾರಿಕೆ, ಸಕ್ಕರೆ ವಲಯಗಳಲ್ಲಿನ ಸಹಕಾರ ಸಂಘಗಳು ಸಮಾಜದಲ್ಲಿ ಹಾಸುಹೊಕ್ಕಾಗಿ, ಅವುಗಳು ಬೀರುತ್ತಿರುವ ಪರಿಣಾಮವನ್ನು ಗಮನಿಸಿದಾಗ ಕೋರ್ಟ್‌ನ ಕಳಕಳಿ ಅರ್ಥವಾಗುತ್ತದೆ.

ಯಾವುದೇ ಕಾಯ್ದೆ ಇರಲಿ, ಕಾಲದ ಅಗತ್ಯಗಳಿಗೆ ಸ್ಪಂದಿಸದೆ ಹೋದರೆ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ಆ ಕಾಯ್ದೆಯನ್ನು ರೂಪಿಸಿದ ಉದ್ದೇಶ ವ್ಯರ್ಥವಾಗುತ್ತದೆ. ಹೀಗಾಗಿ ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಕಾಯ್ದೆಗೆ ಮಾರ್ಪಾಡು ತರುವುದು ಅತ್ಯಗತ್ಯ. ಕೆಸಿಎಸ್ ಕಾಯ್ದೆ ಮತ್ತು ಸಂಬಂಧಿತ ನಿಯಮಗಳು ರಚನೆಯಾದ ಸಮಯದಿಂದಲೂ ಅವುಗಳಲ್ಲಿ ಹಲವು ಸಮಸ್ಯೆಗಳಿವೆ ಎನ್ನುವುದು ತಜ್ಞರ ಅಭಿಮತ. ಈ ಕಾಯ್ದೆಯನ್ನು ರಾಜ್ಯಗಳ ಪುನರ್ ರಚನೆಯ ಹೊಸತರಲ್ಲಿ ತುರ್ತಾಗಿ ರೂಪಿಸಲಾಗಿತ್ತು. ಕಾಯ್ದೆಯೊಂದಿಗೆ ಅಡಕವಾಗಿರುವ ಅಂಶಗಳು ಸಮಗ್ರ ಮತ್ತು ಸಾವಧಾನದ ಪರಿಶೀಲನೆಗೆ ಒಳಪಡದ ಕಾರಣ, ತಪ್ಪಿತಸ್ಥರು ಶಿಕ್ಷೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಅನುವಾಗುವಂತೆ ನಿಯಮಾವಳಿಗಳು ಸಡಿಲವಾಗಿದ್ದವು. ಶಿಕ್ಷೆ ಮತ್ತುದಂಡದ ಪ್ರಮಾಣ ಸಹ ದುರ್ಬಲವಾಗಿದ್ದರಿಂದ ಸಹಕಾರ ಸಂಘಗಳಲ್ಲಿ ಅಪನಂಬಿಕೆ ಮತ್ತು ಅಕ್ರಮಗಳು ಹೆಚ್ಚಾದವು.

ಸಹಕಾರ ಸಂಘಗಳಲ್ಲಿ ಅವ್ಯವಹಾರಗಳು, ಅಕ್ರಮಗಳು, ಹಗರಣಗಳು ಹೆಚ್ಚಾಗುತ್ತಾ ಬರಲು ಕಾಯ್ದೆಯಲ್ಲಿನ ಇಂತಹ ಲೋಪ ದೋಷಗಳೇ ಕಾರಣವಾಗಿವೆ ಎಂದೂ ವಿಶ್ಲೇಷಿಸಲಾಗುತ್ತದೆ. ಕೋರ್ಟ್ ಕೂಡ ಈ ಕಾಯ್ದೆಯು ಹಳೆಯದು ಮತ್ತು ಆಧುನಿಕ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗೆ ಸರಿಹೊಂದದು ಎಂದು ಸ್ಪಷ್ಟವಾಗಿಯೇ ಹೇಳಿದೆ.

1959ರ ಕೆಸಿಎಸ್ ಕಾಯ್ದೆ ಮತ್ತು 1960ರ ಕೆಸಿಎಸ್ ನಿಯಮಗಳನ್ನು ದಶಕಗಳಿಂದಲೂ ಹಲವು ತಿದ್ದುಪಡಿಗಳಿಗೆ ಒಳಪಡಿಸಲಾಗಿದೆ. ದುರದೃಷ್ಟವಶಾತ್, ಅಂತಹ ತಿದ್ದುಪಡಿಗಳನ್ನು ಮಾಡುವಾಗ, ಅಸ್ತಿತ್ವದಲ್ಲಿರುವ ನಿಬಂಧನೆಗಳ



ಮೇಲಿನ ಪರಸ್ಪರಕ್ರಿಯೆ ಮತ್ತು ಅದರಿಂದಾಗುವ ಅಡ್ಡ ಪರಿಣಾಮಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಇಂತಹ ತಿದ್ದುಪಡಿಗಳನ್ನು 'ಆಧುನಿಕ, ಸಾಮಾಜಿಕ, ಆರ್ಥಿಕ ಪರಿಸರಕ್ಕೆ ಹೊಂದಿಕೆಯಾಗದಿರುವ ಸಂಘರ್ಷಯುಕ್ತ ನಿಬಂಧನೆಗಳನ್ನು ಜೋಡಿಸುವ ತೇಪೆ ಕೆಲಸ' ಎಂದು ಕೋರ್ಟ್ ಹೇಳಿರುವುದು ಸರಿಯಾಗಿಯೇ ಇದೆ. ಆದಾಯ ತೆರಿಗೆ ಕಾಯ್ದೆ–1961 ಅನ್ನು ಆಮೂಲಾಗ್ರವಾಗಿ ಬದಲಾಯಿಸಿ ಹೊಸ ಕಾಯ್ದೆ ಜಾರಿಗೆ ತಂದಿರುವುದನ್ನೂ ಕೋರ್ಟ್ ಉದಾಹರಿಸಿದೆ. ಸಹಕಾರಿ ಸಂಸ್ಥೆಗಳ ಸ್ವಾಯತ್ತತೆಯನ್ನು ಹಾಗೂ ಆ ಸಂಸ್ಥೆಗಳಲ್ಲಿ ಸಾಂವಿಧಾನಿಕತ ತ್ವಗಳೊಂದಿಗೆ ದಕ್ಷತೆ, ಪಾರದರ್ಶಕತೆ ಮತ್ತು ಹೊಂದಾಣಿಕೆಯನ್ನು ಖಾತರಿಪಡಿಸಿಕೊಳ್ಳಲು ಅನುವಾಗುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕಿದೆ. ಇಡೀ ದೇಶದಲ್ಲಿ ಮೊತ್ತಮೊದಲ ಸಹಕಾರ ಸಂಘವನ್ನು ಸ್ಥಾಪಿಸಿದ ಹೆಮ್ಮೆಯ ಪರಂಪರೆ ನಮ್ಮದು. ಸ್ವಾತಂತ್ರ್ಯ ಪೂರ್ವದ ಕಾಲಘಟ್ಟದಲ್ಲಿ ಹಲವು ಏಳಿಗೆ ಕಂಡಿದ್ದ ಸಹಕಾರಿ ಸಂಘಗಳು, ನಂತರದ ದಿನಗಳಲ್ಲಿ ಚೇತರಿಕೆಯ ಹಾದಿಯಲ್ಲಿದ್ದವು.ಆದರೆ, ಕಾಯ್ದೆಯ ಲಗಾಮು ಬಿಗಿಗೊಳ್ಳದ ಕಾರಣ ಅವ್ಯವಹಾರಗಳು ಹೆಚ್ಚಾದವು ಎನ್ನುವುದು ವ್ಯಥೆಯ ಸಂಗತಿ. ಹೈಕೋರ್ಟ್‌ನ ಅಭಿಪ್ರಾಯ ಹೊರಬೀಳುವ ಮೊದಲೇ ರಾಜ್ಯ ಸರ್ಕಾರವು ಇದೇ ವರ್ಷ 'ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2025'ಯನ್ನು ರೂಪಿಸಿ, ಅದಕ್ಕೆಎರಡೂ ಸದನಗಳಿಂದ ಅಂಗೀಕಾರವನ್ನೂ ಪಡೆದಿದೆ. ಆದರೆ, ಆ ಮಸೂದೆಯಲ್ಲಿ ಮಾಡಿರುವ ತಿದ್ದುಪಡಿಗಳು ಕೆಲವೇ ಕೆಲವು ಅಂಶಗಳಿಗೆ ಸೀಮಿತವಾಗಿವೆಯೇ ಹೊರತು ಕೋರ್ಟ್ ಹೇಳಿರುವಂತೆ, ಕಾಯ್ದೆಯನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿ ಸಮಗ್ರ ತಿದ್ದುಪಡಿತರುವ ಉದ್ದೇಶವನ್ನು ಹೊಂದಿರಲಿಲ್ಲ. ಈಗಲೂ ಕಾಲ ಮಿಂಚಿಲ್ಲ. ಹೈಕೋರ್ಟ್ ಶಿಫಾರಸುಗಳನ್ನು ಕಾನೂನು ಇಲಾಖೆಯು ಮುಕ್ತ ಮನಸ್ಸಿನಿಂದ ಪರಾಮರ್ಶಿಸಬೇಕು. ಕಾಯ್ದೆಯ ಸಮಗ್ರ ಪರಿಷ್ಕರಣೆಗೆತಜ್ಞರ ಸಮಿತಿ ನೇಮಕ ಮಾಡಬೇಕು. ಸಹಕಾರ ತತ್ವವನ್ನು ಬಲಪಡಿಸುವಂತಹ ಸಶಕ್ತ ಮತ್ತು ಸಮಗ್ರವಾದ ಕಾಯ್ದೆಯನ್ನು ರೂಪಿಸಬೇಕು. ಕೊಳೆತು ನಾರುವ ವ್ಯವಸ್ಥೆಯಿಂದ ಸಹಕಾರಿಕ್ಷೇತ್ರವನ್ನು ಹೊರತರಬೇಕು. ಸಹಕಾರ ಚಳವಳಿಗೆ ಕಾರಣವಾದ ನಾಡಿನಲ್ಲಿ ಸಹಕಾರ ಸಂಘಗಳು ಗತ ವೈಭವವನ್ನು ಮರಳಿ ಪಡೆಯುವಂತೆ ನೋಡಿಕೊಳ್ಳಬೇಕು.




# ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಆಡಳಿತ ಮಂಡಳಿಗೆ ಮುಂದಿನ ತಿಂಗಳು ಚುನಾವಣೆಇದೆ. ಐದು ಸದಸ್ಯರು ಹತ್ತು ವರ್ಷಕ್ಕೆ ಮೇಲ್ಪಟ್ಟು ಸತತವಾಗಿ ಬ್ಯಾಂಕಿನಲ್ಲಿ ನಿರ್ದೇಶಕರಾಗಿದ್ದು ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದಾರೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ 2025ರಲ್ಲಿ ಆದ ತಿದ್ದುಪಡಿಯಂತೆ, ಒಬ್ಬ ವ್ಯಕ್ತಿ ಹತ್ತು ವರ್ಷ ಸತತವಾಗಿ ಬ್ಯಾಂಕಿನ ನಿರ್ದೇಶಕನಾಗಿದ್ದರೆ ಆತ ಮುಂದಿನ ಚುನಾವಣೆಗೆ ಸ್ಪರ್ಧಿಸಲು ಅನರ್ಹನಾಗುವುದರಿಂದ ಈ ಐದು ಮಂದಿ ನಿರ್ದೇಶಕರ ನಾಮಪತ್ರವನ್ನು ತಿರಸ್ಕರಿಸಬೇಕು ಎಂದು ನಮ್ಮ ಒಬ್ಬ ಸದಸ್ಯರು ದೂರು ನೀಡಿದ್ದಾರೆ. ಈ ಪರಿಸ್ಥಿತಿಯಲ್ಲಿ ಬ್ಯಾಂಕು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಕರ್ನಾಟಕ.**

**ಉತ್ತರ :** ದಿನಾಂಕ : ಆಗಸ್ಟ್ 12, 2025ರಂದು ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಯಲ್ಲಿ ಪ್ರಶ್ನೆ ಸಂಖ್ಯೆ 253ಕ್ಕೆ ಉತ್ತರಿಸುತ್ತಾ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 10J(2J(i)ಕ್ಕೆಆದ ತಿದ್ದುಪಡಿಯಂತೆ ಸಹಕಾರ ಬ್ಯಾಂಕುಗಳ ನಿರ್ದೇಶಕರ ಸತತ ಅವಧಿಯನ್ನು 10 ವರ್ಷಗಳಿಗೆ ಸೀಮಿತಗೊಳಿಸಲಾಗಿದ್ದು ತಿದ್ದುಪಡಿಆಗಸ್ಟ್ 1, 2025 ರಿಂದ ಜಾರಿಗೆ ಬಂದಿದ್ದು, ಕಾಯ್ದೆಯ ಅನುಷ್ಠಾನಕ್ಕಾಗಿ ಭಾರತೀಯ ರಿಜರ್ವ್ ಬ್ಯಾಂಕಿಗೆ ತಿಳಿಸಲಾಗಿದೆ ಎಂದು ಹೇಳಿದರು. ಮುಂದುವರಿದು, ಅನರ್ಹರಾದ ಅಧ್ಯಕ್ಷರನ್ನು ಮತ್ತು ನಿರ್ದೇಶಕರನ್ನು ವಜಾ ಮಾಡಲು ಮತ್ತು ಆಡಳಿತ ಮಂಡಳಿಗಳ ಪುನರಚನೆಗೆ ಆದೇಶ ನೀಡಲು ಭಾರತೀಯ ರಿಜರ್ವ್ ಬ್ಯಾಂಕಿಗೆ ಪೂರ್ಣ ಅಧಿಕಾರ ನೀಡಲಾಗಿದೆ ಎಂದು ಹೇಳಿದರು.

ಬಹುರಾಜ್ಯ ಸಹಕಾರ ಸಂಘಗಳಲ್ಲಿ ಕಾಯ್ದೆಯ ಅನುಷ್ಠಾನದ ಮೇಲ್ವಿಚಾರಣೆಯನ್ನು ಕೇಂದ್ರೀಯ ಸಹಕಾರ ಚುನಾವಣಾ ಆಯೋಗ ನೋಡಿಕೊಳ್ಳುತ್ತದೆ. ಇತರೆ ಸಹಕಾರ ಬ್ಯಾಂಕುಗಳಲ್ಲಿ ಕಾಯ್ದೆಯ ಅನುಷ್ಠಾನಕ್ಕೆ ಆಯಾ ರಾಜ್ಯಗಳು ಕ್ರಮಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ರಿಜರ್ವ್ ಬ್ಯಾಂಕು ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸತತ ಹತ್ತು ವರ್ಷಗಳವರೆಗೆ ನಿರ್ದೇಶಕರಾದವರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದು, ಸದ್ಯದಲ್ಲೆ ಈ ಬಗ್ಗೆ ನಿರ್ದೇಶನ ನೀಡುವ ಸಾಧ್ಯತೆ ಇದೆ. ಅಲ್ಲಿಯವರೆಗೆ, ಯಥಾಸ್ಥಿತಿ ಮುಂದುವರೆಯಲಿದೆ. ನಿಮಗೆ ಬಂದ ದೂರಿನ ಪ್ರತಿಯನ್ನು ಸೂಕ್ತ ಕ್ರಮ ಕೈಗೊಳ್ಳಲು ಚುನಾವಣಾ ಅಧಿಕಾರಿಗಳಿಗೆ ನೀಡಿರಿ.

**02. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ಇತ್ತೀಚೆಗೆ ಆದ ತಿದ್ದುಪಡಿಯಂತೆ ನವೆಂಬರ್ 1, 2025ರ ನಂತರ ಗ್ರಾಹಕರು ತಮ್ಮ ಠೇವಣಿಗೆ ನಾಲ್ಕು ಮಂದಿಯ ನಾಮನಿರ್ದೇಶನ (Nomination) ಮಾಡಲು ಅವಕಾಶ ನೀಡಲಾಗಿದೆ. ನಾಮನಿರ್ದೇಶನವನ್ನು ನಾಲ್ಕು ಮಂದಿಗೆ ಅನುಕ್ರಮವಾಗಿ ಅಥವಾ ಏಕಕಾಲದಲ್ಲಿ ಠೇವಣಿ ಮೊತ್ತ ಸಿಗುವಂತೆ ಠೇವಣಿದಾರ ನಿರ್ದೇಶನ ನೀಡಬಹುದಾಗಿದೆ. ತನ್ನ ನಿಧನದ ನಂತರ, ಎ, ಬಿ, ಸಿ, ಡಿ ಯವರೆಗೆ ಕ್ರಮವಾಗಿ ಶೇ.40, 20, 20, 20ರಷ್ಟು ಠೇವಣಿ ಮೊತ್ತವನ್ನು ಏಕಕಾಲದಲ್ಲಿ ನೀಡುವಂತೆ ಠೇವಣಿದಾರ ನಾಮನಿರ್ದೇಶನ ಮಾಡಿರುತ್ತಾನೆ. ಈ ಮಧ್ಯೆ ನಾಮಿನಿ 'ಎ" ಮೃತಪಟ್ಟಿದ್ದರೆ, ಠೇವಣಿಯಲ್ಲಿ ಅವನ ಪಾಲನ್ನು ಉಳಿದವರಿಗೆ ಸಮವಾಗಿ ಹಂಚಬೇಕೇ?**

**– ಶಿವ ಸಹಕಾರಿ ಬ್ಯಾಂಕ್ ಲಿ., ಶಿಕಾರಿಪುರ.**

**ಉತ್ತರ:** ಭಾರತೀಯ ರಿಜರ್ವ್ ಬ್ಯಾಂಕಿನ ನಾಮ ನಿರ್ದೇಶನದ ದಿನಾಂಕ: ಅಕ್ಟೋಬರ್ 28, 2025ರ ನಿರ್ದೇಶನದಂತೆ ಠೇವಣಿದಾರ ಏಕಕಾಲದಲ್ಲಿ ಸಿಗುವಂತೆ ನಾಮನಿರ್ದೇಶನ ನೀಡಿದ್ದು, ಬ್ಯಾಂಕಿನಿಂದ ಠೇವಣಿ ಹಿಂಪಡೆಯುವ ಮೊದಲು ಯಾವುದೇ ನಾಮಿನಿ ಮರಣ ಹೊಂದಿದರೆ ಅಂತಹ ನಾಮಿನಿಗೆ ಸಂಬಂಧಿಸಿದ ನಾಮ ನಿರ್ದೇಶನವು ಮಾತ್ರ ನಿಷ್ಪರಿಣಾಮಕಾರಿಯಾಗುತ್ತದೆ. ಅದರಂತೆ, ನಾಮ ನಿರ್ದೇಶಿತ ಷರತ್ತು ಇಲ್ಲದ ಖಾತೆಗಳಿಗೆ ಅನ್ವಯವಾಗುವ ನಿಬಂಧನೆಗಳು ಮರಣ ಹೊಂದಿದ ನಾಮಿನಿಯ ಪರವಾಗಿ ಮಾಡಿದ ಠೇವಣಿ ಮೊತ್ತದ ಕ್ಲೇಮುಗಳಿಗೆ ಅನ್ವಯವಾಗುತ್ತದೆ. ಅಂದರೆ, ಮರಣ ಹೊಂದಿದ ನಾಮಿನಿಯ ಪಾಲಿನ ಠೇವಣಿ ಮೊತ್ತವು ಠೇವಣಿದಾರನ ವಾರಸುದಾರರಿಗೆ ದೊರೆಯುತ್ತದೆ.

## 72ನೇ ಅಖಿಲ ಭಾರತ ಸಹಕಾರ ಸಪ್ತಾಹ

**ದಿನಾಂಕ: 14.11.2025 ರಿಂದ 20.11.2025**

ಧ್ಯೇಯ: ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು
Theme: Cooperatives as Vehicles for Atmanirbhar Bharat

**ದಿನಾಂಕ : 14.11.2025 ಶುಕ್ರವಾರ, ಸ್ಥಳ : ಬೆಂಗಳೂರು**

ದಿನದ ವಿಷಯ:
ಕಾರ್ಯದಕ್ಷತೆ, ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಡಿಜಿಟಲೀಕರಣವನ್ನು ಪ್ರೋತ್ಸಾಹಿಸುವುದು.
Promoting digitalisation to enhance operational efficiency, accountability and transparency.

**ದಿನಾಂಕ : 15.11.2025 ಶನಿವಾರ, ಸ್ಥಳ : ರಾಯಚೂರು**

ದಿನದ ವಿಷಯ:
ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ:
ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ
Tribhuvan Sahakar University Research, and Training Transforming Cooperative Education.

**ದಿನಾಂಕ : 16.11.2025 ಭಾನುವಾರ, ಸ್ಥಳ : ಮಂಗಳೂರು**

ದಿನದ ವಿಷಯ:
ಸಹಕಾರ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ
Strengthening rural development through cooperatives.

**ದಿನಾಂಕ : 17.11.2025 ಸೋಮವಾರ, ಸ್ಥಳ : ಹೊಸಪೇಟೆ**

ದಿನದ ವಿಷಯ:
ರಾಷ್ಟ್ರೀಯ ಸಹಕಾರ ನೀತಿಯ ಪರಿಸರ ವ್ಯವಸ್ಥೆ
ಭಾರತದ ಸಹಕಾರ ಸಂಸ್ಥೆಗಳಿಗೆ ರಚನಾತ್ಮಕ ಮಾರ್ಗಸೂಚಿ
National Cooperative Policy ecosystem, structured roadmap for India's cooperatives.

**ದಿನಾಂಕ : 18.11.2025 ಮಂಗಳವಾರ, ಸ್ಥಳ : ಹಾವೇರಿ**

ದಿನದ ವಿಷಯ:
ಸಹಕಾರಿ ಉದ್ಯಮಶೀಲತೆಯಿಂದ ಯುವಜನ, ಮಹಿಳಾ ಮತ್ತು ಅಬಲ ವರ್ಗದ ಸಬಲೀಕರಣ (ಕರಕುಶಲ, ಕೈಮಗ್ಗ, ಕಾರ್ಮಿಕ, ಮೀನುಗಾರಿಕೆ ಇತ್ಯಾದಿ)
Empowering Youth, Women and weaker sectors (Handicrafts, handloom, labour, fisheries etc.) through cooperative entrepreneurship.

**ದಿನಾಂಕ : 19.11.2025 ಬುಧವಾರ, ಸ್ಥಳ : ಕೊಪ್ಪಳ**

ದಿನದ ವಿಷಯ:
ಪ್ರವಾಸೋದ್ಯಮ, ಆರೋಗ್ಯ, ಹಸಿರು ಇಂಧನ, ಪ್ಲಾಟ್‌ಫಾರಂ ಸಹಕಾರಿ ಸಂಸ್ಥೆಗಳು, ಕಿಚನ್ ಸಹಕಾರ ಸಂಘಗಳು ಮತ್ತಿತರ ಉದಯೋನ್ಮುಖ ಸಹಕಾರ ಸಂಘಗಳನ್ನು ಅನುಕೂಲಕರ ಪ್ರದೇಶಗಳಿಗೆ ವಿಸ್ತರಣೆ
Expanding cooperatives in emerging areas such as Tourism, Health, Green Energy, Platform Coops, Kitchen Coops and any other Conceivable area.

**ದಿನಾಂಕ : 20.11.2025 ಗುರುವಾರ, ಸ್ಥಳ : ಚಾಮರಾಜನಗರ**

ದಿನದ ವಿಷಯ:
ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವೀನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು
Innovative Cooperative Business models for global competitiveness

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಆಸ್ಟ್ರೇಲಿಯಾ ವಿರುದ್ಧ ನಡೆದ ಎರಡನೇ ಸೆಮಿಫೈನಲ್‌ನಲ್ಲಿ ಜೆಮಿಮಾ ರೊಡ್ರಿಗಸ್ ಅವರ ಭರ್ಜರಿ ಶತಕದ 127ರನ್‌ಗಳ ನೆರವಿನಿಂದ ಇನ್ನೂ ಒಂಬತ್ತು ಎಸೆತಗಳು ಬಾಕಿ ಇರುವಂತೆಯೇ ಭಾರತ ಮಹಿಳೆಯರ ತಂಡ ವಿಶ್ವಕಪ್ ಫೈನಲ್‌ಗೆ ಲಗ್ಗೆ ಇಟ್ಟು, ಗೆಲುವು ಸಾಧಿಸಿ, ಇತಿಹಾಸದಲ್ಲಿಯೇ ಮೊಟ್ಟ ಮೊದಲಬಾರಿಗೆ ಭಾರತದ ನಾರಿಯರು ಕಿರೀಟ ಧರಿಸಿದ್ದಾರೆ.
- ಮಂಗಳೂರಿನ ಆಟೋರಿಕ್ಷಾ ಚಾಲಕ 68 ವರ್ಷದ ಮಾಧವ್ ಸರಿಪಳ್ಳ ಅವರು ಕಳೆದ 14 ವರ್ಷಗಳಲ್ಲಿ ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳಲ್ಲಿ ನಡೆದ ಹಲವಾರು ಮ್ಯಾರಥಾನ್‌ಗಳಲ್ಲಿ ಭಾಗವಹಿಸಿ, ಯುವಕರಿಗೆ ತಮ್ಮ ಸಾಧನೆ ಮೂಲಕ ಸ್ಫೂರ್ತಿ ನೀಡುತ್ತಿದ್ದಾರೆ.
- ಸಂಕಷ್ಟದಲ್ಲಿರುವ ಮಕ್ಕಳು ಮತ್ತು ಮಹಿಳೆಯರಿಗೆ ನೆರವಾಗಲು 'ಅಕ್ಕಪಡೆ' ಸ್ಥಾಪಿಸುವುದಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಹೇಳಿದ್ದಾರೆ. ಬೆಂಗಳೂರಿನಲ್ಲಿ ನವೆಂಬರ್ 19ರಂದು ಇದಕ್ಕೆ ಚಾಲನೆ ನೀಡಲಿದ್ದು, ಬಳಿಕ ಉಡುಪಿ, ಮೈಸೂರು, ಮಂಗಳೂರು, ಬೆಳಗಾವಿಯಲ್ಲಿ ಜಾರಿಗೆ ಬರಲಿದೆ ಎಂದಿದ್ದಾರೆ.
- ನಮ್ಮ ಸೌರಮಂಡಳವನ್ನು ಹೊರಗಿನ ಧೂಮಕೇತುವೊಂದು ಪ್ರವೇಶಿಸಿದ್ದು, ಭೂಮಿಯ ಸಮೀಪ ಹಾದುಹೋಗಲಿದೆ ಎಂಬ ಸಂಗತಿಯು ಜಾಗತಿಕ ಖಗೋಳ ವಿಜ್ಞಾನಿಗಳಲ್ಲಿ ಕುತೂಹಲ ಮೂಡಿಸಿದೆ. ಇದನ್ನು 3I/ATLAS ಎಂದು ಈಗಾಗಲೇ ಕರೆಯಲಾಗಿದೆ. ಸೌರಮಂಡಲದಾಚೆಗಿನ ಧೂಮಕೇತುವೊಂದರ ನಿರ್ದಿಷ್ಟ ಪಥ, ಅದರಲ್ಲಿರುವ ರಾಸಾಯನಿಕ ಅಂಶಗಳು ಮತ್ತು ಅದರಿಂದ ಉಂಟಾಗಬಹುದಾದ ಪರಿಣಾಮಗಳ ಕುರಿತು ವಿಜ್ಞಾನಿಗಳು ಅಧ್ಯಯನ ಆರಂಭಿಸಿದ್ದಾರೆ. ಈ ಧೂಮಕೇತು ಭೂಮಿಯಿಂದ 27 ಕೋಟಿ ಕಿಲೋ ಮೀಟರ್ ದೂರದಲ್ಲಿ ಸಾಗುತ್ತಿದೆ.
- ಆಪರೇಷನ್ ಮಿಲಾಪ್ ಎಂಬ ವಿಶೇಷ ಕಾರ್ಯಾಚರಣೆಯಡಿಯಲ್ಲಿ ಕಾಣೆಯಾದ ಅಥವಾ ಅಪಹರಿಸಲ್ಪಟ್ಟ 28 ಮಕ್ಕಳು ಸೇರಿದಂತೆ 75 ಮಂದಿಯನ್ನು ಪತ್ತೆಹಚ್ಚಿ ಮತ್ತೆ ಅವರ ಕುಟುಂಬದ ಜೊತೆ ಸೇರಿಸುವಲ್ಲಿ ದೆಹಲಿ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ವರದಿಯಾಗಿದೆ. ತಿಳಿಸಿದ್ದಾರೆ.

## ಓದುಗರ ಅನಿಸಿಕೆ...



**ಕುಲೂಹಲ ಮೂಡಿದೆ :** ರಾಜ್ಯೋತ್ಸವ ಪ್ರಶಸ್ತಿ ಮಾದರಿಯಲ್ಲೇ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಲು ಹಾಗೂ ಜಿಲ್ಲೆಗೆ ಒಂದರಂತೆ ಹಾಗೂ ಬೆಂಗಳೂರಿಗೆ ಐದು ಪ್ರಶಸ್ತಿಗಳನ್ನು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಲಹೆ ನೀಡಿರುವುದು ಸೂಕ್ತವಾಗಿದೆ. ಎಲ್ಲರೊಂದಿಗೆ ಚರ್ಚಿಸಿ ಸಹಕಾರರತ್ನ ಆಯ್ಕೆ ಮಾಡುವುದಾಗಿ ತಿಳಿಸಿರುವುದು ಈ ಬಾರಿಯ ಪ್ರಶಸ್ತಿ ಪುಸ್ಕೃತರ ಬಗ್ಗೆ ಕುಲೂಹಲ ಮೂಡಿದೆ.

**▸▸ ಸಿದ್ದನಗೌಡ ಮಲ್ಲನಗೌಡ ಪಾಟೀಲ, ಬೆಳಗಾವಿ**

**ಶ್ಲಾಘನೀಯವಾಗಿದೆ :** ಶ್ರಮಿಕವರ್ಗ ಹಾಗೂ ಜನಸಾಮಾನ್ಯರ ಹಿತಕ್ಕಾಗಿ ಅಲ್ಲದೆ ಕೃಷಿ ಹಾಗೂ ಉದ್ಯೋಗ ಉತ್ತೇಜಿಸಲು ದಶಕಗಳ ಹಿಂದೆ ಸ್ಥಾಪನೆಯಾದ ಸಹಕಾರ ಬ್ಯಾಂಕುಗಳು ಇಂದು ಬದಲಾದ ಕಾಲ ಘಟ್ಟದಲ್ಲಿ ವಾಣಿಜ್ಯ ಬ್ಯಾಂಕುಗಳಿಗೆ ಸರಿಸಮನಾಗಿ ಸೇವೆ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಇದರಿಂದಾಗಿಯೇ ಗ್ರಾಮಗಳ, ಪಟ್ಟಣಗಳ ಆರ್ಥಿಕ ಚಟುವಟಿಕೆಗಳು ಗರಿಗೆದರಿವೆ.

**▸▸ ಕಿರಣ್ ಕುಮಾರ್ ಎನ್.ವಿ., ಮೈಸೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.